ಒ.ಎಸ್.ನಂ:136/2019
ಪಿ.ಡಬ್ಲೂ.1

**ದಿ:13..08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿಗಳ ಪರ ಶ್ರೀ**. B.K.R.,**ವಕೀಲರಿಂದ:-

ನನಗೆ ಈಗ 70 ವರ್ಷ ಇರುತ್ತದೆ ನಾನು 16 ನೇ ವಯಸ್ಸಿನಲ್ಲಿ ಮದುವೆ ಆಗಿರುತ್ತನೆ . ನಾನು ಮದುವೆ ಆದಾಗಿನಿಂದರು ಬಿದರಕೆರೆ ಗೊಲ್ಲರಹಟ್ಟಿ ಗ್ರಾಮದಲ್ಲಿ ವಾಸವಿರುತ್ತೇನೆ . ತಿಪ್ಪಯ್ಯ ರವರ ಮಗ ಬೊಸಪ್ಪ ರವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದಗೆ ನನಗೆ ಗೊತ್ತಿಲ್ಲ. ನಾನು ಬೊಸಪ್ಪ ಅವರ ತಂದೆ ತಿಪ್ಪಯ್ಯ ಅವರನ್ನು ನೋಡಿರುವುದಿಲ್ಲ . ತಿಪ್ಪಯ್ಯ ಮತ್ತು ಕರಿಯಪ್ಪ ರವರು ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರವರ ತಂದೆಯ ಹೆಸರು ತಿಪ್ಪಯ್ಯ ಇರುತ್ತದೆ . ಸದರಿ ತಿಪ್ಪಯ್ಯ ರವರ ತಂದೆಯ ಹೆಸರು ಕರಿಯಪ್ಪ ಇರುತ್ತದೆ .  ಸದರಿ ಕರಿಯಪ್ಪರವರು ಬೋಸಪ್ಪ ರವರ ಚಿಕ್ಕಪ್ಪ ಆಗಬೇಕೆಂದರೆ ಸಾಕ್ಷಿ ಅವರು ಅಣ್ಣ ತಮ್ಮಂದಿರು ಎಂದು ಹೇಳುತ್ತಾರೆ .  ಪ್ರತಿವಾದಿ 1 ರವರ ತಂದೆ ತಿಪ್ಪಯ್ಯ ಅವರು ಸದರಿ ಬೋಸಪ್ಪ ಅವರ ಅಣ್ಣನ ಮಗ ಇರುತ್ತಾರೆ ಎಂದರೆ ಸರಿ.  ಕರಿಯಪ್ಪ ಮತ್ತು ಬೋಸಪ್ಪ ಅವರ ಬಿದರಕೆರೆ ಗೂಲ್ಲರಹಟ್ಟಿಯಲ್ಲಿ ವಾಸವಿದ್ದರು ಎಂದರೆ ಸರಿ.  ಸದರಿ ಬೋಸಪ್ಪ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿ ಬೊಸಪ್ಪ ರವರಗೆ ಇಬ್ಬರು ಹೆಂಡತಿಯವರಿಂದ ಮಕ್ಕಳು ಇರುವುದಿಲ್ಲ ಎಂದರೆ ಸರಿ.  ಬೋಸಪ್ಪ ಅವರ ಪ್ರತಿವಾದಿ 1 ರವರ ತಂದೆಯ ಬಳಿ ಇರುತ್ತಾರೆ ಎಂದರೆ ಸಾಕ್ಷಿ ನನ್ನ  ಜೋತೆ ಇದ್ದರು ಎಂದು ಹೇಳುತ್ತಾರೆ . ಬೋಸಪ್ಪ ರವರಿಗೆ 2 ಸಹೋದರಿಯರು ಇದ್ದರು ಅವರ ಹೆಸರು ಪುಟ್ಟಮ್ಮ ಮತ್ತು ಮಲ್ಲಮ್ಮ ಇರುತ್ತದೆ .  ಸದರಿ ಪುಟ್ಟಮ್ಮ ಅವರು ನನ್ನ ಗಂಡನ ತಾಯಿ ನನಗೆ ಅತ್ತೆ ಆಗಬೇಕು. ನನ್ನ ಗಂಡನ ಜೋತೆ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ . ನನ್ನ ಗಂಡ ತಿಮ್ಮಪ್ಪ ಮತ್ತು ಅವರ ಅಣ್ಣ ಹನುಮಪ್ಪ ಇರುತ್ತಾರೆ .  ನನ್ನ ಗಂಡ ತಿಮ್ಮಪ್ಪ ಅವರ ತಂದೆ ಹೆಸರು ಸೊತ್ತುರು ಹನುಮಪ್ಪ ಇರುತ್ತದೆ . ಸದರಿ ಸೊತ್ತುರು ಹನುಮಪ್ಪ ಅವರಿಗೆ ಒಬ್ಬರೇ ಹೆಂಡತಿ  ಪುಟ್ಟಮ್ಮ ಇರುತ್ತಾರೆ .  ಸದರಿ ಪುಟ್ಟಮ್ಮ ಅವರು ನನಗೆ ಅತ್ತೆ ಆಗಬೇಕೇಂದು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.  ನನ್ನ ಅತ್ತೆ ಪುಟ್ಟಮ್ಮ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಮದುವೆ ಆಗುವ

ಸಮಯಕ್ಕೆ ನಮ್ಮ ಅತ್ತೆ ಮಾವ ಇಬ್ಬರು ತೀರಿ ಹೋಗಿರುತ್ತಾರೆ . ಬೋಸಪ್ಪ ಅವರ ಅಣ್ಣ ತಮ್ಮಂದಿರ ಹೆಸರು ನನಗೆ ಗೊತ್ತಿಲ್ಲ. ಬೋಸಪ್ಪ ನನ್ನ ಜೋತೆ ವಾಸ ಇರುವ ಬಗ್ಗೆತೋರಿಸಲು ನ್ಯಾಯಾಲಯುಕ್ಕೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ . ಸದರಿ ಬೋಸಪ್ಪ ರವರು ನಮ್ಮ ಜೋತೆ ಇರುವ ಬಗ್ಗೆ ತೋರಿಸಲು ಆಹಾರ ಪಡಿತರ ಚೀಟಿ ಹಾಗೂ ಗುರುತಿನ ಚೀಟಿ ಇರುವುದಿಲ್ಲ . ನನ್ನ ಗಂಡ ಮತ್ತು ಬೋಸಪ್ಪ ಅವರಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಾನು ನ್ಯಾಯಲಯುಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವೆ ಆಸ್ತಿಯ ಸರ್ವೆ ನಂಬರ್ 25 ವಿಸ್ತೀರ್ಣ 3 ಎಕರೆ 20 ಗುಂಟೆ ಇರುತ್ತದೆ . ದಾವಾ ಆಸ್ತಿಯ ಎಷ್ಟನೇ ಪೋಡ್ ನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ . ನಾನು ಯಾವ ಪೊಡು ಆಸ್ತಿಗಳ ಬಗ್ಗೆ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ . ಯಾವ ಪೋಡಿನ ದಾವಾ ಆಸ್ತಿಗಳು ಯಾವ ದಿಕ್ಕಿಗೆ ಇರುವ ಬಗ್ಗೆ ನನಗೆ ಗೊತ್ತಿಲ್ಲ . ನನಗೆ ದಾವಾ ಆಸ್ತಿಗಳು ಯಾವ ತಾರೀಖಿನಂದು ನನ್ನ ಹೆಸರಿಗೆ ಬಂದ ಬಗ್ಗೆ ಮಾಹಿತಿ ಇರುವುದಿಲ್ಲ . ನನಗೆ ದಾವಾ ಆಸ್ತಿಗಳ ಚೆಕ್ ಬಂದಿ ಗೊತ್ತಿರುವುದಿಲ್ಲ. ನಿಪಿ 1 ದಾಖಲೆಯ ಅಸಲು ಪ್ರತಿ ನನ್ನ ಬಳಿ ಇರುವ ಬಗ್ಗೆ ನನಗೆ ಗೊತ್ತಿಲ್ಲ . ನಿಪಿ 1 ದಾಖಲೆಯನ್ನು ನಮ್ಮ ತಂದೆಯವರು ಬರೆದುಕೊಟ್ಟಿರುತ್ತಾರೆ ಯಾವ ದಿನಾಂಕದಂದು ನನಗೆ ಗೊತ್ತಿರುವುದಿಲ್ಲ . ನಮ್ಮ ತಂದೆ ಹೆಸರು ಬೋಸಪ್ಪ ತಂದೆ ಕರಿಯಪ್ಪ ಇರುತ್ತದೆ . ನಿಪಿ 1 ದಾಖಲೆಗೆ ಯಾರು ಸಾಕ್ಷಿ ಹಾಕಿರುತ್ತಾರೆ ನನಗೆ ಗೊತ್ತಿರುವುದಿಲ್ಲ . ನಿಪಿ 1 ದಾಖಲೆ ಬೋಸಪ್ಪರವರು ಸಹಿ ಅಥವಾ ಹೆಬ್ಬೆಟ್ಟು ಹಾಕಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ . ಸದರಿ ಹೆಬ್ಬೆಟ್ಟಿಗೆ ಯಾರು ಗುರುತು ಸಾಕ್ಷಿ ಹಾಕಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ 1 ದಾಖಲೆ ಯಾವ ದಿನಾಂಕದಂದು ನೊಂದಾಣಿ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನಿಪಿ 1 ರಲ್ಲಿ ನನ್ನ ಗಂಡ ತಿಮ್ಮಣ್ಣರವರ ಸಹಿ ಮಾಡಿರುತ್ತಾರೆ . ನಾನು ನನ್ನ ಗಂಡನ ಸಹಿಯನ್ನು ನೋಡಿರುವುದಿಲ್ಲ . ನಿಪಿ 1 ರಲ್ಲಿ ನನ್ನ ಗಂಡನ ಸಹಿ ಇರುವ ಬಗ್ಗೆ ನಾನು ನೋಡಿರುವುದಿಲ್ಲ . ನನಗೆ ನಿಪಿ 1 ದಾಖಲೆಯಲ್ಲಿ ಯಾವ ಸರ್ವೆ ನಂಬರ್ ಯಾವ ಪೋಡಿನ ಆಸ್ತಿಗಳು ದಾನ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸದರಿ ಬೋಸಪ್ಪ ರವರು ಯಾವ ಜಮೀನಿನ ಚೆಕ್ ಬಂದಿಯನ್ನು ನನ್ನ ಹೆಸರಿಗೆ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನನಗೆ ನಿಪಿ 1 ಪತ್ರದ ಬಗ್ಗೆ ಯಾವುದೇ ಮಾಹಿತಿ

ಇರುವುದಿಲ್ಲ. ನನಗೆ ನಿಪಿ 1 ದಾನಪತ್ರವು ನನ್ನ ಹೆಸರಿಗೆ ಆದ ಬಗ್ಗೆ ದಾವೆ ಸಲ್ಲಿಸುವ ಕಾಲಕ್ಕೆ ತಿಳಿದು ಬಂದಿರುತ್ತದೆ . ಪ್ರತಿವಾದಿ 1 ರಿಂದ 4 ರವರು ಸರ್ವೆ ನಂಬರ್ 25/2 ಬಿ ರಲ್ಲಿ 34 ಗುಂಟೆಯನ್ನು ಉಳುಮೆ ಮಡುತ್ತಿದ್ದಾರೆ ಎಂದರೆ ಸಾಕ್ಷಿ ಈ ಎರಡು ವರ್ಷದ ಹಿಂದೆ ಗಲಾಟೆ ಮಾಡಿ ನಮ್ಮಿಂದ ಸ್ವಾಧೀನ ಪಡೆದು ಉಳುಮೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ . ಪ್ರತಿವಾದಿಗಳು ಉಳುಮ ಮಾಡುತ್ತಿರುವ ಪೂರ್ವ ದಿಕ್ಕಿಗೆ ದೊಡ್ಡ ಒಬಜ್ಜ ಅವರ ಜಮೀನು ಬರುತ್ತದೆ ಎಂದರೆ ಸರಿ. , ಪಶ್ಚಿಮಕ್ಕೆ ದಬ್ಬಜರ ಬೊಸಪ್ಪ ರವರ ಜಮೀನು ಬರುತ್ತದೆ ಎಂದರೆ ಸರಿ. , ದಕ್ಷಿಣಕ್ಕೆ ಚಿನ್ನಯಲ್ಲಪ್ಪ ಮತ್ತು ತಿಪ್ಪಯ್ಯ ರವರ ಜಮೀನು ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ನನ್ನ ಗಂಡ ತಿಮ್ಮಣ್ಣ ಅವರ ಜಮೀನು ಇರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಹಾಜರುಪಡಿಸಿರುವ ಬಗ್ಗೆ ಗೊತ್ತಿರುವುದಿಲ್ಲ. ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಜಗಳೂರು ಪೋಲಿಸ್ ಠಾಣೆ ಗೆ ಪ್ರತಿವಾದಿಗಳ ವಿರುದ್ಧ ದೂರು ದಾಖಲಿಸಲು ಹೋಗಿರುತ್ತೇನೆ . ಪ್ರತಿವಾದಿಗಳು ನಮ್ಮ ವಿರುದ್ಧ ಗಲಾಟೆ ಮಾಡಿದ ಕಾರಣ ನಾನು ಸದರಿ ದೂರನ್ನು ನೀಡಿರುತ್ತೇನೆ . ನಾನು ಜಗಳೂರು ಪೋಲೀಸರಿಗೆ ನೀಡಿದ ನಿಪಿ 9 ದೂರಿನಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಸನ್ 1992 ರಿಂದ ಇಲ್ಲಿಯವರೆಗು ದಾವಾ ಆಸ್ತಿ ಐಟಂ 2 ರಲ್ಲಿ 34 ಗುಂಟೆ ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಐಟಂ 2 ರ 34 ಗುಂಟೆ ಜಮೀನು ಪ್ರತಿವಾದಿಗಳ ತಂದೆಯಾದ ತಿಪ್ಪಯ್ಯ ಅವರಿಗೆ ಬೋಸಪ್ಪ ಅವರು ದಿ: 16.01.1992 ರಲ್ಲಿ ದಾನ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರ ರಚಿಸಿದ ನಂತರ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಪ್ರತಿವಾದಿಗು ದಿ: 24.06.2020 ರಂದು ಹಾಜರುಪಡಿಸಿದ 2 ಪೋಟೋಗಳನ್ನು ತೋರಿಸಿ ಸದರಿ ಪೋಟೋದಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿರುವ 34 ಗುಂಟೆ ಜಮೀನು ಇರುತ್ತದೆ ಎಂದು ಸೂಚಿಸಿದಾಗ ಸಾಕ್ಷಿ ಒಪ್ಪಿರುತ್ತಾರೆ . ಸದರಿ ಪೋಟೋಗಳನ್ನು ನಿಡಿ 1 ಮತ್ತು 2 ಎಂದು ಗುರುತಿಸಲಾಯಿತು. ನಿಡಿ 1 ಮತ್ತು 2 ರಲ್ಲಿ ಕಾಣುವ ಜಮೀನಿನಲ್ಲಿ ಪ್ರತಿವಾದಿಗಳು ರಾಗಿ ಬೆಳೆದು ಬಣವೆ ಹಾಕಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮೇಲೆ ಹಲ್ಲೇ ಮಾಡಿ ಪ್ರತಿವಾದಿಗಳು ರಾಗಿ ಬೆಳೆದು ಬಣವೆ

ಹಾಕಿರುತ್ತಾರೆ ಎಂದು ಹೇಳುತ್ತಾರೆ . ನಿಡಿ 2 ರಲ್ಲಿರುವ ಕಾಣುವ ರಾಗಿ ಬಣವೆಯ ಪ್ರತಿವಾದಿಗಳು ಸನ್ 2019 ರಲ್ಲಿ ರಾಗಿ ಬೆಳೆದು ಹಾಕಿರುತ್ತಾರೆ ಎಂದರ ಸಾಕ್ಷಿ ಎರಡು ವರ್ಷದ ಹಿಂದೆ ಬೆಳದು ಹಾಕಿರುತ್ತಾರೆ ಎಂದು ಹೇಳುತ್ತಾರೆ . ಸಾಮಾನ್ಯವಾಗಿ ರಾಗಿ ಬೆಳೆಯನ್ನು ಬೆಳೆಯುಲು 4-5 ತಿಂಗಳು ಬೇಕಾಗುತ್ತದೆ ಎಂದರೆ ಸರಿ. ನಿಡಿ 2 ರಲ್ಲಿ ಕಾಣುವ ರಾಗಿ ಬೆಳೆಯ ಹಿಂದಿನ ವರ್ಷ ಸನ್ 2018 ರಲ್ಲಿ ಪ್ರತಿವಾದಿಗಳು ಮೆಕ್ಕಜೋಳ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಸಾಕ್ಷಿ ನಾನು ಬೆಳೆದಿರುತ್ತೇನೆ ಎಂದು ಹೇಳುತ್ತಾರೆ . ನಮಗೂ ಮತ್ತು ದಾವಾ ಜಮೀನಿನ ಪಕ್ಕದಲ್ಲಿ ಇರುವ ಬಸವರಾಜಪ್ಪ ಬಿನ್ ದೊಡ್ಡ ಒಬಪ್ಪ ತಿಮ್ಮಣ್ಣ ಬಿನ್ ಬೊರಪ್ಪ ರವರಿಗೂ ಯಾವುದೆ ಜಗಳ ಇರುವುದಿಲ್ಲ ಎಂದರೆ ಸರಿ. ನನಗೆ ನನ್ನ ಗಂಡನ ಹೆಸರಿಗೆ ಯಾವ ವರ್ಷದಲ್ಲಿ ದಾವಾ ಆಸ್ತಿಗಳ ಖಾತೆ ಮತ್ತು ಮುಟೇಷನ್ ಆದ ಬಗ್ಗೆ ಹೇಳಲು ಬರುವುದಿಲ್ಲ. ನಿಪಿ 3 ದಾಖಲೆಯಲ್ಲಿ ತಾಳೆ ಇರುವುದಿಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿಗೆ ಯಾವ ವರ್ಷದಲ್ಲಿ ಖಾತೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 1 ದಾಖಲೆಯು ನ್ಯಾಯುಬದ್ದ ಇರದ ಕಾರಣ ನನ್ನ ಗಂಡನ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ದಾಖಲೆಯ ಬೋಸಪ್ಪ ಅವರು ಬರೆದುಕೊಟ್ಟ ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಸದರಿ ಪತ್ರವನ್ನು ಯಾರಿಗೂ ಸಹ ಸ್ವೀಕಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ನಿಪಿ 1 ದಾಖಲೆಯಲ್ಲಿ ನನ್ನ ಗಂಡನ ಸಹಿ ಆಗಲಿ ಅಥವಾ ಹೆಬ್ಬೆಟ್ಟಿನ ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ. ಆಗಾಗಿ ನಿಪಿ 1 ದಾಖಲೆಯ ಅಸಲುಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ದಾಖಲೆಯಲ್ಲಿ ನನ್ನ ಗಂಡ ಸ್ವಾಧೀನ ಪಡೆದುಕೊಂಡ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ದಾಖಲೆಯ ಪ್ರಕಾರ ಬೋಸಪ್ಪ ಅವರು ದಾವಾ ಆಸ್ತಿಯ ಐಟಂ 2 ರ 34 ಗುಂಟೆಯನ್ನು ನನ್ನ ಗಂಡನಿಗೆ ಸ್ವಾಧೀನ ಬಿಟ್ಟು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ನಿಪಿ 3 ದಾಖಲೆಯು ತಾಳೆ ಇರುವುದಿಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ಸುಮಾರು 2 ವರ್ಷದ ಹಿಂದೆ ನಮ್ಮ ಸ್ವಾಧೀನಕ್ಕೆ ತೊಂದರೆ ನೀಡಿರುತ್ತಾರೆ ಹಾಗೂ ಪ್ರತಿವಾದಿಗಳು ನಮ್ಮ ದಾವಾ ಆಸ್ತಿಯ ಐಟಂ 2 ಆಸ್ತಿಗೂ ಸಹ ಹಕ್ಕು ಇರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ . ನನ್ನ ಗಂಡ ಈ ಸುಮಾರು 8

ವರ್ಷದ ಹಿಂದೆ ಮರಣಹೊಂದಿರುತ್ತಾರೆ . ನನ್ನ ಗಂಡ ಜೀವಿತ ಕಾಲದಲ್ಲಿ ಸಹ ಪ್ರತಿವಾದಿಗಳು ದಾವಾ ಆಸ್ತಿ ಐಟಂ 2 ರಲ್ಲಿನಮಗೆ ಹಕ್ಕು ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ಗಂಡನ ಮರಣಾನಂತರ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ . ನನ್ನ ಗಂಡ ತೀರಿದ 6 ತಿಂಗಳ ನಂತರ ಪ್ರತಿವಾದಿಗಳು ದಾವಾ ಆಸ್ತಿ ಐಟಂ 2 ರ ಹಕ್ಕಿಗೆ ತಕರಾರು ಮಾಡಿರುತ್ತಾರೆ . ಪ್ರತಿವಾದಿಗಳು ಸದರಿ ದಿನದಂದು ತಮಗೆ ಬೋಸಪ್ಪ ಅವರು ದಾವಾ ಆಸ್ತಿಯ ಐಟಂ 2 ಅನ್ನ ದಾನಾ ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ . ಆಗ ನಮಗೆ ಪ್ರತಿವಾದಿಗಳು ನಮಗೆ ಹಲ್ಲೇ ಮಾಡಿ ಗಲಾಟೆ ಮಾಡಿರುತ್ತಾರೆ . ಸದರಿ ಗಲಾಟೆ ನಡೆದ ನಂತರ ಪ್ರತಿವಾದಿಗಳು ದಾವಾ ಆಸ್ತಿ ಐಟಂ 2 ರಲ್ಲಿ ರಾಗಿ ಬೆಳೆ ಬೆಳೆದಿರುತ್ತಾರೆ . ನಾವು ದಾವಾ ಆಸ್ತಿ ಐಟಂ 2 ರಲ್ಲಿ ಪ್ರತಿವಾದಿಗಳಿಂದ ಸ್ವಾಧೀನ ಬಿಡಿಸಿಕೊಡಲು ಈ ದಾವೆ ಸಲ್ಲಿಸಿರುತ್ತೇವೆ . ನನಗೆ ಬೇರೆ ಯಾವ ಪರಿಹಾರಕ್ಕೆ ದಾವೆ ಸಲ್ಲಿಸಿರುವ ಬಗ್ಗೆ ಗೊತ್ತಿರುವುದಿಲ್ಲ . ನಾನು ಸ್ವಾಧೀನ ಬಿಡಿಸಿಕೊಡಿ ಎಂದು ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬೊಸಪ್ಪ ಅವರ ದಾವಾ ಆಸ್ತಿ ಐಟಂ 2 ರನ್ನು ದಿ: 16.01.1992 ರಲ್ಲಿ ದಾನ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ದಿನದಿಂದಲೂ ಬೋಸಪ್ಪ ರವರು ಪ್ರತಿವಾದಿಯ ತಂದೆಯವರಿಗೆ ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆವತ್ತಿನಿಂದ ಇವತ್ತಿನವರಗೂ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವು ನನಗೂ ಮತ್ತು ಉಳಿದ ವಾದಿಗಳಿಗೂ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಐಟಂ ನಂಬರ್ 3 ಆಸ್ತಿ ಈ ಹಿಂದೆ ನನ್ನ ಅಜ್ಜನ ಹೆಸರಿಗೆ ಇದ್ದು ನಂತರ ನನ್ನ ಗಂಡನ ಹೆಸರಿಗೆ ಬಂದಿರುತ್ತದೆ . ಆದ ಯಾವ ದಿನಾಂಕದಂದು ನನ್ನ ಗಂಡನ ಹೆಸರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ . ಅದನ್ನು ನಾನು ಖರೀದಿ ಮಾಡಿರುವುದಿಲ್ಲ . ನನ್ನ ಹೆಸರಿಗೆ ಯಾವುದೇ ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ದಾಖಲೆಯ ನಾನು ಸೃಷ್ಠಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ 2 ದಾಖಲೆಯನ್ನು ಯಾರಿಂದ ಯಾರ ಹೆಸರಿಗೆ ಯಾವಾಗ ಮತ್ತು ಎಷ್ಟು ಮುಖ ಬೆಲೆಗೆ ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನಿಪಿ 2 ದಾಖಲೆಗೆ ಯಾರು ಸಾಕ್ಷಿ ಹಾಕಿರುತ್ತಾರೆ ನನಗೆ

ಗೊತ್ತಿರುಜವುದಿಲ್ಲ. ಸದರಿ ನಿಪಿ 2 ದಾಖಲೆಯನ್ನು ನನ್ನ ಅಜ್ಜ ನನ್ನ ಮದುವೆ ಪೂರ್ವದಲ್ಲಿ ಖರೀದಿ ಮಾಡಿರುತ್ತಾರೆ . ಸದರಿ ದಾಖಲೆಯನ್ನು ಬರೆದುಕೊಟ್ಟವರು ವಯಸ್ಕರರು , ಅಪ್ರಾಪ್ತರೋ ಗೊತ್ತಿರುವುದಿಲ್ಲ . ಅದರ ಪತ್ರಗಾರರು ನನಗೆ ಗೊತ್ತಿರುವುದಿಲ್ಲ . ಅದು ಎಷ್ಟು ಮೊತ್ತದ ಸ್ಟಾಂಪ್ ಪೇಪರ್ ನನಗೆ ಗೊತ್ತಿರುವುದಿಲ್ಲ . ಅದರ ಸರ್ವೆ ನಂಬರ್ ಚೆಕ್ ಬಂದಿ ನನಗೆ ಗೊತ್ತಿರುವುದಿಲ್ಲ . ಐಟಂ 3 ರಲ್ಲಿ ನಾನು ಸ್ವಾದೀನ ಇರುತ್ತನೇ. ನಾನು ದಾವಾ ಆಸ್ತಿಯಲ್ಲಿ ಎಂದಿಗೂ ಸಹ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ನಾವು ಸ್ವಾಧೀನ ಇಲ್ಲದಿರುವ ಕಾರಣಕ್ಕಾಗಿ ಈ ದಾವೆಯ ಪರಿಹಾರಕ್ಕೆ ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ಎಲ್ಲಾ ಮಾಹಿತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಸೃಷ್ಠಿತ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು